# ತುಂಡುಡುಗೆ ಒಪ್ಪಲ್ಲ

**ಇಂಚರಾ ಜೋಷಿ**
ಸ್ಟಾರ್ ಸುವರ್ಣದ
'ಸರಸೂ'ವಿನ
ಇಂಚರಾ



◆ **ಪಾತ್ರದ ಹೆಸರೇ ನಿಮ್ಮ ಹೆಸರೂ ಆಗಿದ್ದು ಹೇಗೆ?**

'ಸರಸೂ' ಚಿತ್ರೀಕರಣದ ಮೊದಲ ದಿನ ನನ್ನ ಹೆಸರನ್ನು ಕೇಳಿದರು. ನಂತರ ನಾನು ನಿರ್ವಹಿಸುವ ಈ ಪಾತ್ರಕ್ಕೆ ಎರಡು ಹೆಸರನ್ನು ಇಟ್ಟುಕೊಂಡಿದ್ದೇವೆ. ಯಾವುದನ್ನೂ ಅಂತಿಮಗೊಳಿಸಿಲ್ಲ. ಯಾವುದಾದರೂ ಒಂದು ಹೆಸರನ್ನು ಹೇಳಲೂ ಸೂಚಿಸಿದರು. ನಾನು ಇಂಚರಾನೇ ಇರಲಿ, ಅಪರೂಪದ ಹೆಸರು ಎಂದೆ. ತಂಡದ ಬಹುತೇಕರು ಅನುಮೋದಿಸಿದರು. ಹಾಗಾಗಿ ಈಗ ಮನೆಯಲ್ಲಿಯೂ ಇಂಚೂ ಧಾರಾವಾಹಿಯಲ್ಲೂ ಇಂಚೂ ಆಗಿದ್ದೇನೆ. ನನ್ನ ಅಣ್ಣನ ಪಾತ್ರಕ್ಕೆ ಆದಿ ಪ್ರಾಸದ ಅನುಸಾರ ಇಕ್ಷಿತ್ ಎಂದು ನಾಮಕರಣ ಮಾಡಿದರು.

◆ **ನಟಿ ಆಗದಿದ್ದರೆ ಏನಾಗುವ ಆಸೆ ಇತ್ತು?**

ಸಿಎ ಮಾಡಬೇಕು ಎನ್ನುವುದು ಮೂಲ ಬಯಕೆ ನನ್ನದಾಗಿತ್ತು. ಕ್ರಿಯಾಶೀಲ ಚಟುವಟಿಕೆಯಲ್ಲಿ ಆಸಕ್ತಿ ಇದ್ದಿದ್ದರಿಂದ ನಟಿ ಆಗದಿದ್ದರೆ ನನ್ನಿಷ್ಟದ ಅಡುಗೆ ಕೆಲಸವನ್ನೂ ಮಾಡಬಹುದಿತ್ತು. ಡ್ರಾಯಿಂಗ್, ಡಾನ್ಸ್– ಸಂಗೀತದ ಆಸಕ್ತಿ ಇದೆ. ಬರವಣಿಗೆ– ನಿರ್ದೇಶನವೂ ಪ್ರೀತಿಯ ಕ್ಷೇತ್ರ. ಆಕಸ್ಮಿಕವಾಗಿ ಬಣ್ಣದ ಜಗತ್ತಿಗೆ ಬಂದೆ. ಇವತ್ತು ಹಲವು ವೇದಿಕೆಗಳಿವೆ. 90 ವರ್ಷದ ಅಜ್ಜಿ ಕೋವಿಡ್ ಪಾಸಿಟಿವ್ ನಂತರವೂ ಬರ್ಫಿ ತಯಾರಿಸಿ ಮಾರುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳ ಮೂಲಕವೇ ಒಳ್ಳೆಯ ಮಾರುಕಟ್ಟೆ ಜಾಲ ಬಳಸಬಹುದು. ಪೇಂಟಿಂಗ್ ಮಾಡಿದರೂ ಅದಕ್ಕೂ ಅಲ್ಲಿ ಮಾರಕಟ್ಟೆಯನ್ನು ಪಡೆಯಬಹುದು. ಸಂಗೀತ– ಗಾಯನವನ್ನೂ ಮಾರಬಹುದು. ಯಾರದ್ದೋ ವಾರ್ಷಿಕೋತ್ಸವ– ಹುಟ್ಟುಹಬ್ಬಕ್ಕೆ ಆನ್‌ಲೈನ್‌ನಲ್ಲಿ ಹಾಡಿ ಕಳಿಸಿ ಸಂಪಾದಿಸಬಹುದು. ಇನ್‌ಸ್ಟಾಗ್ರಾಮ್‌ನಲ್ಲಿ ಹಿರಿಯ ನಾಗರಿಕ ದಂಪತಿ ವಿಡಿಯೊ ಮಾಡುತ್ತಾರೆ. ಹೆಚ್ಚಿನ ಅವಕಾಶವನ್ನು ಬಳಸುವ ಅವಕಾಶವನ್ನು ತಂತ್ರಜ್ಞಾನ ಕಲ್ಪಿಸಿದೆ.

◆ **ನಿಮ್ಮ ಪರಿಚಯವನ್ನು ಮಾಡಬಹುದಾ?**

ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರು. ಅಮ್ಮ ಜ್ಯೋತಿ ಕುಂದಾಪುರ, ಅಪ್ಪ ಸುಹಾಸ್ ಜೋಷಿ ಬೆಳಗಾವಿಯ ಮೂಲದವರು. ಅಮ್ಮ ಶಿಕ್ಷಕಿ ಆಗಿದ್ದರು ನಮ್ಮ ಪೋಷಣೆಗಾಗಿ ಗೃಹಿಣಿ ಆಗಿದ್ದಾರೆ. ಅಪ್ಪ ಖಾಸಗಿ ಸಂಸ್ಥೆಯಲ್ಲಿ ವ್ಯವಸ್ಥಾಪಕರಾಗಿದ್ದರು. ಎರಡು ವರ್ಷದ ಹಿಂದೆ ನಮ್ಮನ್ನು ಅಗಲಿದ್ದಾರೆ. ಅಕ್ಕ ಮಾನಸಿ ಜೋಷಿ ಆಕೆ ಕೂಡ ನಟಿ. ಪ್ರಾಥಮಿಕ ಶಾಲೆಯ ದಿನಗಳು ಹುಡುಗನಂತೆ ಕ್ರಿಕೆಟ್ ಆಡ್ತಾ ಸುತ್ತಾಡುತ್ತಿದ್ದೆ. ಹುಡುಗರ ರೀತಿ ಬಾಯ್‌ಕಟ್ ಮಾಡಿಸುತ್ತಿದ್ದೆ. ಸ್ವಲ್ಪ ದೂರಕ್ಕೆ ಮನೆ ಬದಲಿಸಿದೆವು. ಓದಲು ಆಸಕ್ತಿ ಇಲ್ಲದಿದ್ದರೂ ಅದರಲ್ಲಿ ತೊಡಗುವುದು ಅನಿವಾರ್ಯವಾಯಿತು. ಪ್ರೌಢಶಾಲೆಯಲ್ಲಿ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದೆ. ಮೊದಲ ವರ್ಷ ರೂಪಕ ಒಂದನ್ನು ರಚಿಸಿ ನಾನೇ ನಾಯಕಿ ಆಗಿ ನಟಿಸಿದ್ದೆ. ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಮೂರನೇ ಬಹುಮಾನ ಪಡೆದೆ, ಎರಡನೇ ವರ್ಷ ಮತ್ತೊಂದು ರೂಪಕ ಮಾಡಿಸಿದ್ದೆ. ಅದಕ್ಕೆ ಎರಡನೇ ಸ್ಥಾನ ಬಂದಿತ್ತು. ಸಿಎ ಮಾಡುವ ಹಂತದಲ್ಲಿಯೇ ಯಾಕೋ ಹಿಂಜರಿಕೆ ಆಯಿತು. ಅಪ್ಪನ ಸಲಹೆಯಂತೆ ಒಂದು ಸಂಸ್ಥೆಯಲ್ಲಿ ಮೂರು ತಿಂಗಳು ನಟನೆಯನ್ನು ಕಲಿತೆ. ನಂತರ ನಿರಂತರ ಆಡಿಷನ್ ನೀಡಿ 'ಮರಳಿ ಬಂದಳು ಸೀತೆ'ಯಲ್ಲಿ ಮೊದಲ ಅವಕಾಶ ಪಡೆದೆ.

◆ **ಸೀರಿಯಲ್– ಸಿನಿಮಾದಲ್ಲಿ ಪಾತ್ರದ ಆಯ್ಕೆಯನ್ನು ಹೇಗೆ ಮಾಡುತ್ತೀರಿ?**

ಹಲವು ಸಿನಿಮಾಗಳಲ್ಲಿ ಅವಕಾಶ ಬಂದಿದ್ದವು. ಆಗ ನನ್ನದೇ ಆದ ಕೆಲವು ನೀತಿಗಳು ಇವೆ ಅದನ್ನು ಹೇಳುತ್ತೇನೆ. ತುಂಡು ಉಡುಗೆಯ ಪಾತ್ರಗಳನ್ನು ಒಪ್ಪುವುದಿಲ್ಲ. ವೇಷಭೂಷಣ ನನಗೆ ಹೊಂದಾಣಿಕೆ ಆಗಬೇಕು. ನನಗೆ ಸರಿ ಹೊಂದುವ– ಇಷ್ಟ ಆಗುವಂತೆ ಇದ್ದರೆ ಮಾತ್ರ ಮಾಡ್ತೀನಿ. 'ಮರ್ದಿನಿ' ಸಿನಿಮಾದಲ್ಲಿ ಮಾಡುತ್ತಿದ್ದೇನೆ. ಸೀರಿಯಲ್‌ನಲ್ಲಿ ಪಾತ್ರವನ್ನು ಮೋಲ್ಡ್ ಮಾಡಲು ಕಾರ್ಯಾಗಾರ ಹೆಚ್ಚು ಇರುವುದಿಲ್ಲ. ಈ ಮೊದಲು ನಿರ್ವಹಿಸಿದ ಪಾತ್ರಗಳಿಗಿಂತ ಭಿನ್ನವೂ ಸವಾಲಿನ ಪಾತ್ರಗಳು ಸಿಕ್ಕರೆ ಖುಷಿ ಅನ್ನಿಸುತ್ತದೆ. ಯಾವುದೇ ಪಾತ್ರ ಇಷ್ಟ ಆದರೆ ಮಾತ್ರ ಒಪ್ಪುತ್ತೇನೆ

◆ **ಮುಂದಿನ ದಿನಗಳ ಕನಸು?**

ನಿರ್ಮಾಣ ಸಂಸ್ಥೆಯನ್ನು ಮಾಡುವ ಆಸೆ ಇದೆ. ನನ್ನ ಅಕ್ಕನ ಜೊತೆ ಸೇರಿ ಮಾಡುತ್ತೇನೆ ಎನ್ನುವ ವಿಶ್ವಾಸವೂ ಇದೆ. ನನ್ನದೇ ಕಥೆ, ನಿರ್ದೇಶನವನ್ನು ಮಾಡುವ ಉದ್ದೇಶ ಇದೆ. ಪ್ರಾಣಿಗಳು ಇಷ್ಟ ಆಗುತ್ತವೆ. ಅವುಗಳ ಆರೈಕೆ ಮತ್ತು ಪೋಷಣೆಗೆ ನೆರವಾಗುತ್ತೇನೆ. ಭವಿಷ್ಯದ ಬಗ್ಗೆ ತುಂಬ ಜನರಿಗೆ ಆತಂಕ ಇದೆ. ಆದರೆ ಪ್ರಯತ್ನವನ್ನು ಮಾತ್ರ ಬಿಡಬಾರದು. ಕೋವಿಡ್ ಕಾರಣಕ್ಕೆ ನನ್ನ ಮೂರು ಸೀರಿಯಲ್ ನಿಂತವು. ಎದೆಗುಂದಲಿಲ್ಲ ನನ್ನ ಪ್ರಯತ್ನ ಮುಂದುವರಿಸಿದೆ ಹೊಸ ಅವಕಾಶಗಳು ಸಿಕ್ಕಿವೆ. ಸಿನಿಮಾದಲ್ಲಿಯೂ ಮಾಡಲು ಸಾಧ್ಯ ಆಗಿದೆ.

■ **ರಾಘವೇಂದ್ರ ಕೆ.**